## ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಳಲ್ಕೆರೆ

## ಸಿ.ಸಿ. ನಂ : 1038/2020

ಸಾಕ್ಷಿದಾರರ ಹೆಸರು : ಭರತಮ್ಮ ಪಿಡಬ್ಲ್ಯು:04

ತಂದೆ / ಗಂಡನ ಹೆಸರು : ತಿಮ್ಮೇಶ್ ಸಿಡಬ್ಲ್ಯು:03

ವಯಸ್ಸು : 45 ವರ್ಷ

ಉದ್ಯೋಗ : ಮನೆಕೆಲಸ

ವಾಸಸ್ಥಳ : ಬಿದರಕೆರೆ ಪ್ರ.ವ.ಬೋ ದಿ. :30.01.2024

### ಮುಖ್ಯ ವಿಚಾರಣೆ : ಮಾನ್ಯ ಎ.ಪಿ.ಪಿ.ಯವರಿಂದ

ನ್ಯಾಯಾಲಯದ ಮುಂದೆ ಇರುವ ಹಾಜರಿರುವ 1 ಮತ್ತು 3 ನೇ ಆರೋಪಿತರು ಗೊತ್ತು. ಈ ದಿನ 2, 4 ರಿಂದ 6ನೇ ಆರೋಪಿತರ ಪರ ವಕೀಲರು ಗೈರು ಹಾಜರಾತಿ ವಿನಾಯಿತಿ ಅರ್ಜಿ ಸಲ್ಲಿಸಿದ ಮೇರೆಗೆ 2, 4 ರಿಂದ 6 ನೇ ಆರೋಪಿತರನ್ನು ಗುರುತಿಸಲಾಯಿತು ಎಂದು ತೆಗೆದುಕೊಳ್ಳಲಾಯಿತು (ಈ ಬಗ್ಗೆ ಆರೋಪಿ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ). ಚಾ.ಸಾಃ 1 ನನ್ನ ಬಾವ. ಚಾ.ಸಾಃ 2 ನನ್ನ ಬಾವನ ಹೆಂಡತಿ. ಚಾ.ಸಾಃ 4 ನನ್ನ ಸಂಬಂಧಿ. ಚಾ.ಸಾಃ 5 ನನ್ನ ಗಂಡ. ಚಾ.ಸಾಃ 6 ಮತ್ತು 7 ಗೊತ್ತು. ಈ ಪ್ರಕರಣದ ವಿಚಾರಗಳಾವವು ನನಗೆ ಗೊತ್ತಿಲ್ಲ. ನಾನು ಯಾವುದೇ ಗಲಾಟೆಯನ್ನು ನೋಡಿಲ್ಲ ಮತ್ತು ಯಾವುದೇ ಗಲಾಟೆಯನ್ನು ಬಿಡಿಸಿಲ್ಲ. ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಕೈಕಾಲುಗಳಿಂದ ಹಲ್ಲೆಪಡಿಸಿಲ್ಲ ಹಾಗೂ ಯಾವುದೇ ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ಈ ಸಂಬಂಧ ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎಪಿಪಿಯವರು ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು)

### ಪಾಟೀಸವಾಲು : ಮಾನ್ಯ ಎಪಿಪಿಯವರಿಂದ

ದಿನಾಂಕ : 05.08.2012 ರಂದು ರಾತ್ರಿ 8.15 ಗಂಟೆ ಸಮಯದಲ್ಲಿ ನನ್ನ ಗಂಡ ಚಾ.ಸಾಃ 1 ರವರೊಂದಿಗೆ ನಮ್ಮಗಳ ಮನಗೆ ನೀರಿನ ಸಂಪರ್ಕ ಪಡೆಯಲು ನಲ್ಲಿ ಹಾಕಿಕೊಳ್ಳಲು ಭೂತಪ್ಪನ ದೇವಸ್ಥಾನ ದ ಸಮೀಪ ಪೈಪ್ ಲೈನನ್ನು ಹಾಕಿಕೊಳ್ಳುತ್ತಿರುವಾಗ

ಆರೋಪಿತರೆಲ್ಲರೂ ಹಳೇಯ ವೈಶಮ್ಯದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಚಾ.ಸಾಃ 1 ರವರಿಗೆ ಸೂಳೇ ಮಗನೇ , ಬೋಳಿ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿರುವುದಿಲ್ಲ. 1 ನೇ ಆರೋಪಿ ಕುಡುಗೋಲಿನಿಂದ ಚಾ.ಸಾಃ 1 ರವರ ತಲೆಗೆ ಹೊಡೆದು ರಕ್ತ ಗಾಯ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಅದನ್ನು ಕಂಡು ನಾನು ಜಗಳ ಬಿಡಿಸಲು ಹೋದಾಗ 1 ನೇ ಆರೋಪಿ ನನಗೂ ಸಹ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. ಅದನ್ನು ಕಂಡು ಚಾ.ಸಾಃ 2 ಮತ್ತು 3 ರವರು ಗಲಾಟೆ ಬಿಡಿಸಲು ಹೋದಾಗ ಆರೋಪಿತರೆಲ್ಲರೂ ಸೇರಿ ಕೈಕಾಲುಗಳಿಂದ ಅವರ ಮೈಕೈಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಅದನ್ನು ಕಂಡು ಚಾ.ಸಾಃ 5 ರವರು ಆರೋಪಿತರಿಗೆ ಚಿಮಾರಿ ಹಾಕಿ ಜಗಳ ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲಿಂದ ಹೋಗುವಾಗ ಆರೋಪಿತರೆಲ್ಲರೂ ನಿಮ್ಮ ಪ್ರಾಣ ತೆಗೆಯುತ್ತೇವೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕಃ 06.08.2012 ರಂದು ನನಗೆ ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಅಲ್ಲಗಳೆದ ಹೇಳಿಕೆಯನ್ನು ನಿಪಿಃ 4 ಎಂದು ಗುರುತಿಸಲಾಯಿತು.

ಆರೋಪಿತರು ನಮ್ಮ ವಿರುದ್ದ ಸಿಸಿ: 1026/2020 ರಂತೆ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ಆ ಕಾರಣದಿಂದ ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನಾನು ಹಾಗೂ ಆರೋಪಿತರು ರಾಜೀ ಆಗಿರುತ್ತೇವೆ ಎಂದರೆ ಸರಿ. ರಾಜೀ ಆಗಿರುವ ಕಾರಣಕ್ಕೆ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲು ಆರೋಪಿ ಪರ ವಕೀಲರಿಂದ ಇರುವುದಿಲ್ಲ

**ಮರು ವಿಚಾರಣೆ ಇಲ್ಲ :**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಹೊಳಲ್ಕೆರೆ